ಇ) ಎ.ಆರ್.ಡಬ್ಲ್ಯೂ. ಎಸ್. ಮತ್ತು ಎನ್.ಆರ್. ಡಬ್ಲ್ಯೂ.ಎಸ್. ಯೋಜನೆಗಳನ್ನು 3 ವರ್ಷಗಳಲ್ಲಿ ಮತ್ತು ಮಿನಿವಾಟರ್ ಸಪ್ಲೈ ಯೋಜನೆಯನ್ನು ಪ್ರಸಕ್ತ ವರ್ಷದಲ್ಲಿಯೇ ಕಾಮಗಾರಿಗಳನ್ನು ಪೂರ್ಣಗೊಳಿಸುವ ಉದ್ದೇಶ ಮತ್ತು ನಿಯಮಾವಳಿ ಇರುತ್ತದೆ. ಆದರೆ ಕೆಲವು ಯೋಜನೆಗಳಲ್ಲಿ ತಾಂತ್ರಿಕ ಆಡಚಣೆಗಳಿಂದ ವಿಳಂಬವಾಗುವ ಸಾಧ್ಯತೆ ಇರುತ್ತದೆ.

ನೀರಾವರಿ ಯೋಜನೆಗಳು.

3029 - ಶ್ರೀ ಕೆ.ಹೆಚ್. ಕುರಡಗಿ. (ಮುಂಡರಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿನಲ್ಲಿ ಹೊಸ ಏತ ನೀರಾವರಿ ಯೋಜನೆಗಳನ್ನು ಇನ್ನು ಕೈಗೊಳ್ಳದಿರಲು ಕಾರಣಗಳೇನು?

ಆ) ರಾಟಿ ಏತ ನೀರಾವರಿ ಯೋಜನೆ 1983ರಲ್ಲಿಯೇ ಆಯವ್ಯಯದಲ್ಲಿಅಳವಡಿಸಲಾಗಿದ್ದರೂ ಇನ್ನೂ ಕಾರ್ಯಗತವಾಗದಿರಲು ಕಾರಣವೇನು?

ಇ) ಅಡವಿ ಹನುಮಪ್ಪ ಏತ ನೀರಾವರಿ ಯೋಜನೆಯು ಸರ್ವೆ ಆದರೂ ಸಹ ಇನ್ನೂ ಕಾರ್ಯ ಪ್ರಾರಂಭವಾಗಿಲ್ಲ ಎಂದಿನಿಂದ ಪ್ರಾರಂಭಿಸಲಾಗುವುದು.

ಈ) ಗುಮ್ಮಗೋಳ ಏತ ನೀರಾವರಿ ಬಜೆಟ್‌ನಲ್ಲಿ ಬಂದಿದ್ದರೂ ಸಹ ಇನ್ನೂ ಕಾರ್ಯಗತವಾಗದಿರಲು ಕಾರಣಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು)

ಅ) ನಬಾರ್ಡ್ ಮತ್ತು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ಇವುಗಳ ನಡುವೆ ಯೋಜನೆಗಳಿಗೆ ಸಾಲ ಮಂಜೂರಾತಿ ಧೋರಣೆ ಮಾರ್ಚ್ 1991ರಲ್ಲಿ ಅಂತಿಮ ರೂಪು ತಾಳಿದ್ದರಿಂದ ಮುಂಡರಗಿ ತಾಲ್ಲೂಕಿನಲ್ಲಿಯ ಹೊಸ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿಳಂಬವಾದ ಕಾರಣವಾಗಿದೆ.

ಆ) ಯೋಜನೆಗೆ ತುಂಗಭದ್ರಾ ಜಲಾಶಯದಿಂದ ನೀರೆತ್ತಬೇಕಾಗಿದ್ದು, ನೀರಿನ ಲಭ್ಯತೆ ಇಲ್ಲದಿರುವುದರಿಂದ ಯೋಜನೆಯನ್ನು ಕೈಬಿಡಲಾಗಿದೆ.

ಇ) ಅಡವಿ ಹನುಮಪ್ಪ ಏತ ನೀರಾವರಿ ಯೋಜನೆಗೆ ತುಂಗಭದ್ರಾ ಜಲಾಶಯದಿಂದ ನೀರತ್ತ ಬೇಕಾಗಿದ್ದು ನೀರಿನ ಲಭ್ಯತೆ ಇಲ್ಲದಿರುವುದರಿಂದ ಈ ಯೋಜನೆಯನ್ನು ಕೈಬಿಡಲಾಗಿದೆ.

ಈ) ಗುಮ್ಮಗೋಳ ಏತ ನೀರಾವರಿ ಯೋಜನೆಯು ನಿಗಮದ ಪ್ರಸಕ್ತ ವರ್ಷದ ಅಂದರೆ 1991-92ನೇ ವರ್ಷದ ಕಾರ್ಯಯೋಜನೆಯಲ್ಲಿ ಇದ್ದರೂ, ಯೋಜನೆಯ ಅಂದಾಜು ಪತ್ರಿಕೆಯನ್ನು ನಬಾರ್ಡಿಗೆ ಸಲ್ಲಿಸಿ,ಸಾಲ ಸೌಲಭ್ಯವನ್ನು ಪಡೆಯಬೇಕಾಗಿರುವುದರಿಂದ ಯೋಜನೆಯ ಕಾರ್ಯಇನ್ನೂ ಕಾರ್ಯಗತವಾಗಿರುವುದಿಲ್ಲ.

ಏತ ನೀರಾವರಿ ಯೋಜನೆಗಳು.

3011 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು)ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ (ಗ)ಹಳ್ಳೂರು, (ಖ)ರಾಮತೀರ್ಥ, (ಚ) ಬೈರನವಾಡ ಎರಡನೇ ಹಂತದ ಏತ ನೀರಾವರಿ ಯೋಜನೆಗಳನ್ನು ಈ ಹಿಂದೆಯೇ ಮಂಜೂರು ಮಾಡಿರುವುದನ್ನು ಸರ್ಕಾರ ಗಮನಿಸಿದೆಯೇ?